**ಇಂದು ದಿನಾಂಕ:** 02.04.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಹೆಚ್.ಎನ್.ಯು. ವಕೀಲರಿಂದಃ**

ನನ್ನ ತಂದೆ ಭಾಗಾಂಶಕ್ಕಾಗಿ ಕೇಸು ಹಾಕಿದ್ದಾರೆ. 7 ಆಸ್ತಿಗಳಿಗೆ ಈ ಕೇಸು ಹಾಕಿದ್ದೇವೆ. ಈಗ ನನಗೆ 32 ವರ್ಷ ವಯಸ್ಸಾಗಿದೆ. ನನ್ನ ತಾಯಿ ಮೂಲತಃ ಕಟ್ಟೆಮಳವಳ್ಳಿಕೊಪ್ಪಲು ಗ್ರಾಮದ ನಿವಾಸಿ ಎಂದರೆ ಸರಿ. ನನ್ನ ತಂದೆ ಸುಮಾರು 35 ವರ್ಷಗಳ ಹಿಂದೆ ಕಟ್ಟೆಮಳವಳ್ಳಿಕೊಪ್ಪಲು ಗ್ರಾಮಕ್ಕೆ ಬಂದು ನಮ್ಮ ಅಜ್ಜಿ ಮನೆಯಲ್ಲಿ ಸೇರಿಕೊಂಡರು ಎಂದರೆ ಸುಳ್ಳು. ವಾದಿಗಳ ಆಧಾರ್ ಕಾರ್ಡ್ ಗಳಲ್ಲಿ ಅವರ ವಿಳಾಸ ಕಟ್ಟೆಮಳವಳ್ಳಿಕೊಪ್ಪಲು ಗ್ರಾಮಕ್ಕೆ ಇದೆ ಎಂದರೆ ಸರಿ. ನಾನು ಎಲ್ಲಾ ವ್ಯವಹಾರವನ್ನು ಕಟ್ಟೆಮಳವಳ್ಳಿಕೊಪ್ಪಲು ಗ್ರಾಮದಲ್ಲಿ ಮಾಡುತ್ತಿದ್ದೇನೆ ಎಂದರೆ ಸರಿ. ದಾವಾ ಆಸ್ತಿಗಳ ಚೆಕ್ಕುಬಂಧಿ ಗೊತ್ತಿಲ್ಲ.

ಸ.ನಂ.108 ರಲ್ಲಿ ಒಟ್ಟು 7 ಎಕರೆ ಇದ್ದು, ಸದರಿ ಆಸ್ತಿ ನನ್ನ ತಾತನ ಹೆಸರಿಗೆ ಖಾತೆಯಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಪಹಣಿ, ಮ್ಯುಟೇಷನ್ ಹಾಜರುಪಡಿಸಿದ್ದೇನೆ ಬಾಕಿ ದಾಖಲೆಗಳು ನನಗೆ ಗೊತ್ತಾಗುವುದಿಲ್ಲ. 7 ಎಕರೆ ಆಸ್ತಿ ನನ್ನ ತಾತನಿಗೆ ಹೇಗೆ ಬಂದಿತ್ತು ಎಂಬುದರ ಬಗ್ಗೆ ನಾನು ದಾಖಲೆ ನೋಡಿಲ್ಲ. 7 ಎಕರೆ ಜಮೀನು ಬೇರೆ ಬೇರೆ ಇದೆ. ಸ.ನಂ.108 ರಲ್ಲಿ ನನ್ನ ತಾತನಿಗೆ 7 ಎಕರೆ ಜಮೀನು ಮಂಜೂರು ಮಾಡಿರಲಿಲ್ಲ ಎಂದರೆ ಸರಿಯಲ್ಲ ನನ್ನ ತಾತನ ಹೆಸರಿಗೆ ನ್ಯಾಯಾಲಯದಿಂದ ಡಿಕ್ರಿಯಾಗಿದೆ. ಆ ಕೇಸು ಯಾವಾಗ ಯಾರ ಯಾರ ನಡುವೆ ಆಗಿದೆ ಎಂದು ಗೊತ್ತಿಲ್ಲ. ನ್ಯಾಯಾಲಯದ ಡಿಕ್ರಿಯ ಬಗ್ಗೆ ನನ್ನ ತಂದೆ ವಾದ ಪತ್ರದಲ್ಲಿ ಬರೆಸಿರುವ ಬಗ್ಗೆ ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಯನ್ನು ಉಳುಮೆ ಮಾಡಲು ಒಂದು ವಾರ ಅಥವಾ 15 ದಿವಸಕ್ಕೊಮ್ಮೆ ಬಂದು ಹೋಗುತ್ತೇನೆ.

ಕಟ್ಟೆಮಳವಳ್ಳಿಕೊಪ್ಪಲು ಗ್ರಾಮದಿಂದ ದೊರೆಕೆರೆ ಗ್ರಾಮಕ್ಕೆ ಸುಮಾರು 35 ಕಿಮೀ ದೂರವಿದೆ. ವ್ಯವಸಾಯ ಮಾಡಲು ಬಂದಾಗ ನನ್ನ ತಾತನ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದೆ. ದಾವಾ ಆಸ್ತಿ 7 ಐಟಂಗಳಲ್ಲಿಯೂ ನಾನು ಉಳುಮೆ ಮಾಡುತ್ತೇನೆ. 7 ಎಕರೆ, 4 ಗುಂಟೆ, 4½ ಗುಂಟೆ, 16 ½ ಗುಂಟೆ, 16 ½ ಗುಂಟೆ, 12 ½ ಗುಂಟೆ, 13 ಗುಂಟೆ ಇದೆ. ನನ್ನ ತಂದೆ ಕಾಲದಿಂದಲೂ ದಾವಾ ಆಸ್ತಿಯಲ್ಲಿ ಜಂಟಿ ಸ್ವಾಧೀನವಿದ್ದೇವೆ. ನನ್ನ ತಾತ ಬದುಕಿದ್ದಾಗ ನನ್ನ ತಂದೆ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೇಳಿದ್ದರು, ಆದರೆ ನನ್ನ ತಾತ ಇವಾಗ ಅಥವಾ ಮುಂದೆ ಖಾತೆ ಮಾಡಿಕೊಳ್ಳೋಣ ಎಂದು ತಳ್ಳಿಕೊಂಡು ಬರುತ್ತಿದ್ದರು. ಈ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ದಾವಾ ಆಸ್ತಿಗಳು ನಮ್ಮ ದೊಡ್ಡಪ್ಪ ಮತ್ತು ಚಿಕ್ಕಪ್ಪನ ಹೆಸರಿನಲ್ಲಿರುವುದು 2023 ರಲ್ಲಿ ತಿಳಿಯಿತು.

2 ಮತ್ತು 5 ನೇ ಪ್ರತಿವಾದಿಗಳ ನಡುವೆ ಅನ್ಯೋನ್ಯತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 5 ರವರು ಅನ್ಯೋನ್ಯವಾಗಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ಭಾಗಾಂಶ ಕೊಡಬೇಕೆಂದು ನಾವು ಕೇಳಿಲ್ಲ. ಸುಳ್ಳು ವಂಶವೃಕ್ಷ ಕೊಟ್ಟು ಪ್ರತಿವಾದಿ 3 ಮತ್ತು 5 ರವರು ದಾವಾ ಆಸ್ತಿಯ ಖಾತೆ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಅವರು ಸುಳ್ಳು ವಂಶವೃಕ್ಷ ಕೊಟ್ಟಿರುವ ವಿಷಯ ನನಗೆ ದಿನಾಂಕ 20.06.2023 ರಂದು ತಿಳಿಯಿತು. ಆ ರೀತಿ ತಿಳಿದ ನಂತರ ವಕೀಲರ ಮೂಲಕ ನೋಟೀಸು ಕೊಡಿಸಿದ್ದೇವೆ. ದಿನಾಂಕ 10.03.2023 ರಂದು ದೊರೆಕೆರೆ ಗ್ರಾಮದಲ್ಲಿ ಪಂಚಾಯಿತಿ ಸೇರಿಸಲಾಗಿತ್ತು. ಯಜಮಾನರ ಹೆಸರುಗಳು ಗೊತ್ತಿಲ್ಲ. ದೊರೆಕೆರೆ ಗ್ರಾಮದಲ್ಲಿ ಯಾವುದೇ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ನನಗೆ ಬೇಡವೆಂದು ನನ್ನ ತಂದೆ ಒಪ್ಪಿಗೆ ಪತ್ರ ಬರೆದುಕೊಟ್ಟು ಸುಮಾರು 35 ವರ್ಷಗಳ ಹಿಂದೆ ದೊರೆಕೆರೆ ಗ್ರಾಮ ಬಿಟ್ಟು ಕಟ್ಟೆಮಳವಳ್ಳಿಕೊಪ್ಪಲು ಗ್ರಾಮಕ್ಕೆ ಬಂದು ಅಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ನನ್ನ ತಾಯಿಯ ತಂದೆಯ ಹೆಸರು ದೊಡ್ಡೇಗೌಡ. ನನ್ನ ಅಜ್ಜಿಯ ಹೆಸರು ಜಯಮ್ಮ, ಬದುಕಿದ್ದಾರೆ. ಸದರಿ ದೊಡ್ಡೇಗೌಡರಿಗೆ 4 ಜನ ಹೆಣ್ಣು ಮಕ್ಕಳು. ಅವರ ಪೈಕಿ ನನ್ನ ತಾಯಿ ಪದ್ಮಮ್ಮ, ಯಶೋಧಮ್ಮ ಮುಷ್ಕೆರೆಗೆ ಮದುವೆಯಾಗಿದ್ದಾರೆ, ಮಂಜುಳಾರವರು ಹನಗೋಡು ಗ್ರಾಮಕ್ಕೆ ಮದುವೆಯಾಗಿದ್ದಾರೆ, ನಾಗರತ್ನಮ್ಮ ನನ್ನ ತಂದೆಗೆ 2 ನೇ ಮದುವೆಯಾಗಿದ್ದಾರೆ. ನನ್ನ ತಾತನಿಗೆ ಒಟ್ಟು 2 ಎಕರೆ ಜಮೀನು ಇದೆ. ನನ್ನ ತಂದೆ ಮತ್ತು 2 ನೇ ಹೆಂಡತಿಗೆ ರಕ್ಷಿತ ಒಬ್ಬಳೇ ಮಗಳು. ನನ್ನ ತಾಯಿ 2004 ರಲ್ಲಿ ತೀರಿಕೊಂಡಿರಬಹುದು ಆವಾಗ ನಾನು ತುಂಬಾ ಚಿಕ್ಕವನಾಗಿದ್ದೆ. ನನ್ನ ಮಲತಾಯಿ ಜೊತೆ ನಾನು ವಾಸವಿದ್ದೆ. ನನ್ನ ತಾತನ 2 ಎಕರೆ ಜಮೀನಿನಲ್ಲಿ ನನ್ನ ತಾಯಿ ಮತ್ತು ನಾನು ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿ.

ನನ್ನ ತಾತನಿಗೆ ಹೆಣ್ಣು ಮಕ್ಕಳು ಮಾತ್ರ ಇದ್ದ ಕಾರಣ ನನ್ನ ತಂದೆ ದೊರೆಕೆರೆ ಗ್ರಾಮ ಬಿಟ್ಟು ನನ್ನ ತಾಯಿ ತವರು ಮನೆಯಲ್ಲಿ ಮನೆಯ ಅಳಿಯನಾಗಿ ಇದ್ದರು ಎಂದರೆ ಸುಳ್ಳು. ದೊಡ್ಡೇಗೌಡನ ಪತ್ನಿ ಜಯಮ್ಮ ನನ್ನ ತಾತನಿಗೆ ಬೀಗತಿಯಾಗಬೇಕು. ಜಯಮ್ಮನವರ ಮಗಳನ್ನು ತಮ್ಮೇಗೌಡನ ಮಗ ಕುಚೇಲಗೌಡರಿಗೆ ಮದುವೆ ಮಾಡಲಾಗಿದೆ. ಜಯಮ್ಮ ತಮ್ಮೇಗೌಡರ ತಂಗಿಯಾಗಿದ್ದು, ಜಯಮ್ಮನವರ ಮಗಳನ್ನು ನಮ್ಮ ತಂದೆಗೆ ಮದುವೆ ಮಾಡಲಾಗಿತ್ತು ಎಂದರೆ ಸುಳ್ಳು. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಂದೆ ಪ್ರತಿವಾದಿ 3 ಮತ್ತು 5 ರವರಿಗೆ ಒಪ್ಪಿಗೆ ಪತ್ರ

ಬರೆದುಕೊಟ್ಟು ನನ್ನ ತಂದೆಯೇ ಮುಂದಾಗಿ ನಿಂತು ಅವರ ಹೆಸರಿಗೆ ದಾವಾ ಆಸ್ತಿಯ ಖಾತೆ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು.

ಪ್ರತಿವಾದಿ 3 ಮತ್ತು 5 ರವರ ಹೆಸರಿನಲ್ಲಿ ತಲಾ ಒಂದೊಂದು ಬ್ಯಾರನ್ ಲೈಸೆನ್ಸ ಇದೆ. ಸದರಿ ಬ್ಯಾರನ್ ಲೈಸೆನ್ಸ ಯಾರ ಹೆಸರಿನಿಂದ ವರ್ಗಾವಣೆಯಾಗಿದೆ ಎಂದು ಗೊತ್ತಿಲ್ಲ. ತಂಬಾಕು ಬೆಳೆಯುವವರಿಗೆ ಸರ್ಕಾರದಿಂದ ಲೈಸೆನ್ಸ ಕೊಡುತ್ತಾರೆ ಎಂದರೆ ಸರಿ. ಪ್ರತಿವಾದಿ 3 ಮತ್ತು 5 ರವರಿಗೆ ಸರ್ಕಾರದಿಂದ ಲೈಸೆನ್ಸ ನೀಡಿರುವುದರಿಂದ ಬ್ಯಾರೆನ್ ಲೈಸೆನ್ಸ ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ಬ್ಯಾರೆನ್ ಲೈಸೆನ್ಸ ನಂಬರ್ ಟಿಬಿಜಿಆರ್ ನಂಬರ್ 50195019024 ಗೊತ್ತಿದೆ. ಅದು ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಟಿಬಿಜಿಆರ್ ನಂಬರ್ 019090 ಅದು ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಕೊಟ್ಟಿಲ್ಲ. ದಾಖಲೆ ಕೊಡಲು ಯಾವುದೇ ತೊಂದರೆ ಇಲ್ಲ. ಯಾವುದೇ ವ್ಯಕ್ತಿ ಬ್ಯಾರೆನ್ ಲೈಸೆನ್ಸ ಪಡೆದುಕೊಳ್ಳಬೇಕಾದರೆ ತಂಬಾಕು ಬೆಳೆಯಬೇಕು ಎಂದರೆ ಸರಿ.

ಸ.ನಂ.117/6 ರಲ್ಲಿ ಬ್ಯಾರೆನ್ ಮನೆ ಇವೆ. ನನ್ನ ತಾತ ಇದ್ದಾಗಲೇ ಬ್ಯಾರನ್ ಮನೆ ನಿರ್ಮಿಸಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಹೌದು. ಯಾವ ವರ್ಷದಲ್ಲಿ ಬ್ಯಾರೆನ್ ಲೈಸೆನ್ಸ್ ನೀಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ರಾಗಿ, ಜೋಳ, ತಂಬಾಕು ಬೆಳೆದಿದ್ದೇವೆ. ಲೈಸೆನ್ಸ ಮೂಲಕವೇ ತಂಬಾಕು ಮಾರಾಟ ಮಾಡಬೇಕು ಎಂಬುದು ಸರಿ. ನನ್ನ ತಂದೆ ತಂಬಾಕು ಮಾರಾಟ ಮಾಡಿಲ್ಲ ಪ್ರತಿವಾದಿ 3 ಮತ್ತು 5 ರವರು ವ್ಯವಹಾರ ಮಾಡುತ್ತಿದ್ದುದ್ದರಿಂದ ಅವರೇ ತಂಬಾಕು ಮಾರಾಟ ಮಾಡಿದ್ದಾರೆ. ನನ್ನ ತಂದೆ ಪ್ರತಿವಾದಿ 3 ಮತ್ತು 5 ರವರು ಬೇರೆ ಬೇರೆಯಾಗಿ 20 ವರ್ಷಗಳಾಗಿವೆ. ಆ ಕಾಲದಲ್ಲಿ ನನ್ನ ತಾತ

ಬದುಕಿದ್ದರು. ಬಾಯಿ ಮಾತಿನ ಮೂಲಕ ಜಮೀನು ಸ್ವಾಧೀನ ಕೊಟ್ಟಿದ್ದರು. ಪ್ರತಿವಾದಿಗಳೊಡನೆ ನಾನು ಅನ್ಯೋನ್ಯವಾಗಿದ್ದೇನೆ. ನಮ್ಮ ತಾತ ಬದುಕಿದ್ದಾಗಲೇ ದಾವಾ ಆಸ್ತಿಗಳನ್ನು ಪ್ರತಿವಾದಿ 3 ಮತ್ತು 5 ರವರಿಗೆ ಕೊಟ್ಟಿದ್ದು ನಮ್ಮ ತಂದೆ ಮೂವತ್ತು ಸಾವಿರ ರೂಪಾಯಿ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು. 5 ನೇ ಪ್ರತಿವಾದಿ ನನ್ನ ಜೊತೆ ಶಾಮೀಲಾಗಿ ಕೇಸು ಹಾಕಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಈಗಾಗಲೇ ಮೂವತ್ತು ಸಾವಿರ ಹಣ ಪಡೆದುಕೊಂಡಿದ್ದರು ಸಹ ಅನ್ಯತಾ ಪಾಯಿದೆ ಹೊಂದಲು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವೆ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೇ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**